# ಕಲಿಕಾಫಲ – 9

ಸೂಕ್ತ ಲೇಖನ ಚಿಹ್ನೆಯೊಂದಿಗೆ ವಾಕ್ಯಗಳು, ಒಗಟುಗಳು, ನುಡಿಗಟ್ಟುಗಳು, ಗಾದೆಗಳು, ನಾಣ್ಣುಡಿಗಳು, ಲೇಖನ ಚಿಹ್ನೆಗಳು ಮತ್ತು ಕಾಲ, ಲಿಂಗ ಮೊದಲಾದ ವ್ಯಾಕರಣಾಂಶಗಳ ಪ್ರಯೋಗ ಮಾಡುವರು.

## ಚಟುವಟಿಕೆ 1: ನನ್ನ ಕನ್ನಡ

ಲೇಖನ ಚಿಹ್ನೆಗಳನ್ನು ಗಮನಿಸಿ ನಿಮ್ಮ ಸಹಪಾಠಿಗಳೊಂದಿಗೆ ಚರ್ಚಿಸಿ ಮುಂದೆ ಖಾಲಿ ಬಿಟ್ಟಿರುವ ಜಾಗದಲ್ಲಿ ಅವುಗಳ ಹೆಸರನ್ನು ಬರೆಯಿರಿ.

| ಲೇಖನ ಚಿಹ್ನೆಗಳು | ಹೆಸರು | ಲೇಖನ ಚಿಹ್ನೆಗಳು | ಹೆಸರು |
|---|---|---|---|
| . | ಪೂರ್ಣ ವಿರಾಮ | , | ಅಲ್ಪ ವಿರಾಮ |
| ; | ಅರ್ಧ ವಿರಾಮ ಚಿಹ್ನೆ | | |
| | | ' ' | ಪಾರಿಭಾಷಿಕ ಚಿಹ್ನೆ |
| :- | ವಿವರಣ ಸೂಚಿ ಚಿಹ್ನೆ | | |
| | ವಾಕ್ಯ ವೇಷ್ಟಕ ಸೀಮಾತಲ ರೇಖೆ | ( ) | ಅಲ್ಪಾವರಣ |
| ? | ಪ್ರಶ್ನಾರ್ಥಕ ಚಿಹ್ನೆ | | |
| | | " " | ಉದ್ಧರಣ ಚಿಹ್ನೆ |
| ! | ಭಾವಸೂಚಕ ಚಿಹ್ನೆ | { } | ಪುಷ್ಪಾವರಣ |

## ಚಟುವಟಿಕೆ 2: ಕತೆಯೊಳಗೆ

ಕಥೆಯನ್ನು ಗಮನವಿಟ್ಟು ಓದಿ. ನಂತರ ಕೆಳಗೆ ನೀಡಿರುವ ಪ್ರಶ್ನೆಗೆ ಉತ್ತರಿಸಿರಿ.

ವಿಕ್ರಮನು ತನ್ನ ಸಭೆಯಲ್ಲಿ ಪ್ರತಿನಿತ್ಯ ಬಡವರಿಗೆ ದಾನ ನೀಡುವ ಪರಿಪಾಠ ಇಟ್ಟುಕೊಂಡಿದ್ದ. ಹೀಗೆ ದಾನ ನೀಡುವಾಗ ಅಲ್ಲಿಗೆ ಬಂದ ಸಾಧುವು ವಿಕ್ರಮನಿಂದ ದಾನ ಪಡೆದುಕೊಂಡು ಹೋಗುವಾಗ ಅವನ ಕೈಯಲ್ಲಿ ಆಶೀರ್ವಾದಪೂರ್ವಕವಾಗಿ ಒಂದು ಹಣ್ಣನ್ನು ಕೊಟ್ಟು ಹೋಗುತ್ತಿದ್ದನು. ಅದನ್ನು ಕತ್ತರಿಸಿ ನೋಡಿದರೆ ಅದರಲ್ಲಿ ಅಮೂಲ್ಯ ವಜ್ರಗಳಿರುತ್ತಿದ್ದವು. ಇದು ಪ್ರತಿನಿತ್ಯವೂ ನಡೆದು ಬಂತು. "ಇವನ್ಯಾಕೆ ನನಗೆ ಪ್ರತಿ ನಿತ್ಯವೂ ಹಣ್ಣಿನ ರೂಪದಲ್ಲಿ ಹರಳುಗಳನ್ನು ಕೊಡುತ್ತಿದ್ದಾನೆ?" ಎಂದು ಸೋಜಿಗಪಟ್ಟ ವಿಕ್ರಮನು ಒಂದು ದಿನ ಬೈರಾಗಿಯನ್ನು ತಡೆದು ನಿನಗೇನು ಬೇಕಾಗಿದೆ? ನಿನ್ನ ಉದ್ದೇಶವೇನು? ಎಂದು ಕೇಳಿದನು.

ಈ ಕಥೆಯಲ್ಲಿ ಬಂದಿರುವ ಲೇಖನ ಚಿಹ್ನೆಗಳ ಹೆಸರುಗಳನ್ನು ಪಟ್ಟಿ ಮಾಡಿ ನಿಮ್ಮ ಸಹಪಾಠಿಯೊಂದಿಗೆ ಸರಿಯಾಗಿದೆಯೇ ಎಂದು ಪರಿಶೀಲಿಸಿರಿ.

ಪೂರ್ಣ ವಿರಾಮ, ಉದ್ಧರಣ ಚಿಹ್ನೆ, ಪ್ರಶ್ನಾರ್ಥಕ ಚಿಹ್ನೆ

### ಚಟುವಟಿಕೆ 3: ಚಿಹ್ನೆ ನಾನೇ ಹಾಕುವೆ.

ಗದ್ಯಭಾಗವನ್ನು ಓದಿ, ನಿಮ್ಮ ಗೆಳೆಯರೊಂದಿಗೆ ಚರ್ಚಿಸಿ ಸೂಕ್ತ ಲೇಖನ ಚಿಹ್ನೆ ಹಾಕಿರಿ.

ಸ್ವಾತಂತ್ರ್ಯ ಹೋರಾಟ ದಿನ ದಿನ ಬೆಳೆಯುತ್ತಾ ಹೋಯಿತು 1942ರಲ್ಲಿ ಗಾಂಧೀಜಿಯವರು ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಎಂಬ ಘೋಷಣೆ ಮಾಡಿದರು ದೇಶದೆಲ್ಲೆಡೆ ಗಾಂಧೀಜಿಯವರ ಘೋಷಣೆಗೆ ಭಾರತೀಯರ ಬೆಂಬಲ ದೊರೆಯಿತು ದಕ್ಷಿಣ ಭಾಗದ ಈ ಚಳುವಳಿಗೆ ಮೈಲಾರ ಮಹದೇವ ನೇತೃತ್ವ ವಹಿಸಿದ್ದರು ಹಳ್ಳಿಹಳ್ಳಿಗಳಲ್ಲಿ ತಿರುಗಿ ಗಾಂಧೀಜಿಯವರ ಘೋಷಣೆಯನ್ನು ಪ್ರಚಾರ ಮಾಡಿದರು ಅವರ ಮಾತುಗಳು ದೇಶಭಕ್ತಿಯನ್ನು ಬಡಿದೆಬ್ಬಿಸಿದವು

### ಚಟುವಟಿಕೆ 4: ಉತ್ತರ ಕಂಡು ಹಿಡಿಯಿರಿ.

ನೀಡಿರುವ ಒಗಟುಗಳ ಸರಿ ಉತ್ತರ ಬರೆಯೋಣ.

- ಇದ್ದಿಲು ನುಂಗುತ, ಗದ್ದಲ ಮಾಡುತ, ಉದ್ದಕ್ಕೂ ಓಡುತ ಮುಂದಕೆ ಸಾಗುವೆನು.

  ರೈಲು

- ಊಟಕ್ಕೆ ಕುಳಿತವರು ಹನ್ನೆರಡು ಜನರು. ಬಡಿಸುವವರು ಇಬ್ಬರು. ಒಬ್ಬನು ಒಬ್ಬರಿಗೆ ಬಡಿಸುವಷ್ಟರಲ್ಲಿ ಇನ್ನೊಬ್ಬ ಹನ್ನೆರಡು ಜನಕ್ಕೂ ಬಡಿಸುತ್ತಾನೆ.

  ಗಡಿಯಾರ

- ನೀವು ಬರೆದ ಉತ್ತರ ಸರಿ ಎಂದು ಹೇಗೆ ಹೇಳುವಿರಿ? ಸಹಪಾಠಿಯೊಂದಿಗೆ ಚರ್ಚಿಸಿ ಬರೆಯಿರಿ.

ರೈಲಿಗೆ ಇಂಧನ ಕಲ್ಲಿದ್ದಲು ಕಲ್ಲಿದ್ದಲು ಉರಿಸಿ ಅದರಿಂದ ಬಂದ ಶಕ್ತಿಯಿಂದ ರೈಲು ಓಡುತ್ತದೆ ಮತ್ತು ಉದ್ದಕ್ಕೂ ಓಡುತ್ತದೆ ಮತ್ತು ಅದು ಹೆಚ್ಚು ಸದ್ದು ಮಾಡುತ್ತದೆ ಹೀಗಾಗಿ ಮೊದಲನೇ ಉತ್ತರ ರೈಲು. ಗಡಿಯಾರದಲ್ಲಿ 12 ಸಂಖ್ಯೆಗಳಿರುತ್ತವೆ ಗಂಟೆ ಮುಳ್ಳು ಮತ್ತು ನಿಮಿಷದ ಮುಳ್ಳು ನಡುವೆ ಓಡುತ್ತಿರುತ್ತವೆ. ಗಂಟೆ ಮುಳ್ಳು ಒಂದು ಸಂಖ್ಯೆ ಓಡುವಷ್ಟರಲ್ಲಿ ನಿಮಿಷದ ಮುಳ್ಳು ಪೂರ್ಣ ಒಂದು ಸುತ್ತು ಸುತ್ತು ಬಿಡುತ್ತಾನೆ.

### ಚಟುವಟಿಕೆ 5: ನಮ್ಮೂರ ಒಗಟುಗಳು

ನಿಮ್ಮ ಮನೆಯಲ್ಲಿರುವ ಹಿರಿಯರನ್ನು ಕೇಳಿ ಒಗ

1. ಆಕಾಶದಲ್ಲಿ ಕೊಡಲಿಗಳು ತೇಲಾಡುತ್ತವೆ- **ಹುಣಸೇಹಣ್ಣು**
2. ಬೆಳ್ಳಿ ಸಮುದ್ರದಲ್ಲಿ ಕಪ್ಪು ಸೂರ್ಯ-**ಕಣ್ಣು**
3. ಅಕ್ಕನ ಮೇಲೆ ಛತ್ರಿ- **ರೆಪ್ಪೆ**
4. 
5. ಹುಟ್ಟುತ್ತಲೇ ಹುಡುಗ ತಲೆಯಲ್ಲಿ ಟೋಪಿ ಹಾಕಿರುತ್ತೆ .-ಬದನೆಕಾಯಿ.
6. ಸಾಗರ ಪುತ್ರ ,ಸಾರಿನ ಮಿತ್ರ.-ಉಪ್ಪು
7. ಸಾವಿರಾರು ಹಕ್ಕಿಗಳು, ಒಂದೇ ಬಾರಿಗೆ ನೀರಿಗಿಳಿತವೆ.-ಅಕ್ಕಿ
8. ಗುಡುಗು, ಗುಡುಗಿದರೆ ಸಾವಿರ ನಯನಗಳು ಅರಳುವುದು.-ನವಿಲು.

ಕಣ್ಣಿಲ್ಲ, ಕಾಲಿಲ್ಲ ,ಆದರು ಚಲಿಸುತಿದೆ ಯಾವುದು ಎಲ್ಲಿದೆ ಬಲ್ಲಿದನ ಹೇಳಿರಲ.-ನದಿ

## ಚಟುವಟಿಕೆ 6: ಭಾಷಾ ಸೊಗಡು.

ಕಥೆಯನ್ನು ಓದಿ. ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅದೊಂದು ದೊಡ್ಡ ಊರು. ಮುಂಜಾನೆ ಆ ಊರಿನ ನಾಗಣ್ಣ ಮತ್ತು ರಾಮಣ್ಣ ಇಬ್ಬರು ವಾಕಿಂಗ್ ಹೊರಟಿದ್ದರು. ಅವರಿಬ್ಬರು ಮಾತನಾಡುವಾಗ ಏನೋ ಜಗಳ ಶುರುವಾಯಿತು. ರಾಮಣ್ಣ **ಊಟ ಬಲ್ಲವನಿಗೆ ರೋಗವಿಲ್ಲ; ಮಾತು ಬಲ್ಲವನಿಗೆ ಜಗಳವಿಲ್ಲ;** ಎಂಬ ಮಾತಿನಂತೆ ತಾನು ಮಾತನಾಡುವುದನ್ನು ನಿಲ್ಲಿಸಿ ಅಲ್ಲಿಂದ ತನ್ನ ಮನೆಗೆ ಹೋದನು. ರಾಮಣ್ಣನ **ಕೋಪ ತಣ್ಣಗಾಗಲಿಲ್ಲ.** ಅವನು ನಾಗಣ್ಣನ ಮೇಲೆ **ಕತ್ತಿ ಮಸೆಯುತ್ತಲೇ** ಇದ್ದನು. ಕೊನೆಗೆ **ಶಕ್ತಿಗಿಂತ ಯುಕ್ತಿ ಮೇಲು** ಎಂಬ ಮಾತಿನಂತೆ ನಾಗಣ್ಣ **ಪಾಠ ಕಲಿಸಲು** ನಿರ್ಧರಿಸಿ ತನ್ನ ಅಜ್ಜಿ ಯಾವಾಗಲೂ ಹೇಳುತ್ತಿದ್ದ **ಉಪಾಯ ಬಲ್ಲವನಿಗೆ ಅಪಾಯವಿಲ್ಲ** ಎಂಬ ಮಾತು ನೆನಪಿಗೆ ಬಂದು ಅದಕ್ಕೆ ತಕ್ಕಂತೆ ಒಂದು ಉಪಾಯವನ್ನು ಮಾಡಿ ನಾಗಣ್ಣನನ್ನು ಮತ್ತೊಮ್ಮೆ ಕಾಣಲು **ಹೊಂಚು ಹಾಕುತ್ತಿದ್ದನು.**

1. ಕಥೆಯಲ್ಲಿ ದಪ್ಪ ಅಕ್ಷರಗಳಲ್ಲಿ ಬರೆದ ಪದಗಳನ್ನು ಪಟ್ಟಿಮಾಡಿರಿ.

**ಊಟ ಬಲ್ಲವನಿಗೆ ರೋಗವಿಲ್ಲ ಮಾತು ಬಲ್ಲವನಿಗೆ ಜಗಳವಿಲ್ಲ,ಕೋಪ ತಣ್ಣಗಾಗಲಿಲ್ಲ,ಕತ್ತಿ ಮಸೆ,ಶಕ್ತಿಗಿಂತ ಯುಕ್ತಿ ಮೇಲು,ಪಾಠ ಕಲಿಸಲು, ಉಪಾಯ ಬಲ್ಲವನಿಗೆ ಅಪಾಯವಿಲ್ಲ ,ಹೊಂಚು ಹಾಕು.**

2. ಮೇಲೆ ಪಟ್ಟಿಮಾಡಿರುವ ಪದಗಳನ್ನು ಗಾದೆ ಮಾತುಗಳು ಮತ್ತು ನುಡಿಗಟ್ಟುಗಳಾಗಿ ವಿಂಗಡಿಸಿ ಬರೆಯಿರಿ.

| | |
|---|---|
| ಗಾದೆ ಮಾತು | ಊಟ ಬಲ್ಲವನಿಗೆ ರೋಗವಿಲ್ಲ ಮಾತು ಬಲ್ಲವನಿಗೆ ಜಗಳವಿಲ್ಲ.<br>ಶಕ್ತಿಗಿಂತ ಯುಕ್ತಿ ಮೇಲು, ಉಪಾಯ ಬಲ್ಲವನಿಗೆ ಅಪಾಯವಿಲ್ಲ. |
| ನುಡಿಗಟ್ಟು | ಕೋಪ ತಣ್ಣಗಾಗಲಿಲ್ಲ, ಪಾಠ ಕಲಿಸಲು, ಹೊಂಚು ಹಾಕು, ಕತ್ತಿ ಮಸೆ. |

3. ನಿಮಗೆ ಗೊತ್ತಿರುವ ಗಾದೆ ಮಾತುಗಳನ್ನು ಬರೆಯಿರಿ. (ಹಿರಿಯರ ನೆರವು ಪಡೆಯಿರಿ)

ಆತುರಗಾರನಿಗೆ ಬುದ್ಧಿ ಮಟ್ಟ
ತಾಯಿಯಂತೆ ಮಗಳು ನೂಲಿನಂತೆ ಸೀರೆ.
ಮಾತು ಬೆಳ್ಳಿ ,ಮೌನ ಬಂಗಾರ
ಕೈ ಕೆಸರಾದರೆ ಬಾಯಿ ಮೊಸರು .
ಬೆಳ್ಳಗಿದ್ದಿದ್ದೆಲ್ಲ ಹಾಲಲ್ಲ.
ತಾಳಿದವನು ಬಾಳಿಯಾನು.

ಮನಸ್ಸಿದ್ದರೆ ಮಾರ್ಗ.
ವೇದ ಸುಳ್ಳಾದರು ಗಾದೆ ಸುಳ್ಳಾಗದು.
ಹಾಸಿಗೆ ಇದ್ದಷ್ಟು ಕಾಲು ಚಾಚು.
ಅಲ್ಪರ ಸಂಘ ಅಭಿಮಾನ ಭಂಗ.
ಮಾಡಿದವರ ಪಾಪ ಆಡಿದವರ ಬಾಯಲ್ಲಿ.

4. ನೀವು ತಿಳಿದಿರುವ ನುಡಿಗಟ್ಟುಗಳನ್ನು ಬರೆಯಿರಿ.

ಕಣ್ಣಿಗೆ ಬೀಳು, ಕಣ್ಣು ಬಂತು, ಎಕ್ಕಹುಟ್ಟಿಹೋಯಿತು, ಬಾಲಬಿಚ್ಚು, ಮೂಗು ಹಾಕು, ನಿದ್ದೆಕೊರೆ, ಹೊಟ್ಟುಕುಟ್ಟು, ಸತ್ತು ಸುಣ್ಣವಾಗು, ತೋಟದೂರ, ಮೀಸೆ ಮಣ್ಣಾಗು, ಬೇಳೆಬೇಯೊಲ್ಲ, ಕಿವಿಕಚ್ಚು, ಹರಟೆಕೊಚ್ಚು, ಬೆಟ್ಟುಮಡಿಸು, ಟೋಪಿ ಹಾಕು, ಹುಬ್ಬು ಹಾರಿಸು,

## ಚಟುವಟಿಕೆ 7: ನುಡಿಗಟ್ಟು

ಶಿಕ್ಷಕರ / ಹಿರಿಯರ ಸಹಾಯದೊಂದಿಗೆ ನುಡಿಗಟ್ಟುಗಳನ್ನು ಸಂಗ್ರಹಿಸಿ ಮತ್ತು ಅವುಗಳ ಅರ್ಥ ಬರೆಯಿರಿ. ಅವಶ್ಯವಿದ್ದರೆ ಶಬ್ದಕೋಶದ ಸಹಾಯ ಪಡೆದುಕೊಳ್ಳಿ.

| ಮಾದರಿ | ಕಾಲಿಗೆ ಬುದ್ಧಿ ಹೇಳು | ಓಡಿ ಹೋಗು |
|---|---|---|
| 1 | | |
| 2 | | |
| 3 | | |
| 4 | | |
| 5 | | |
| 6 | | |
| 7 | | |
| 8 | | |
| 9 | | |
| 10 | | |

1) ಪ್ರಪಂಚ ಕಾಣದವ - ಅನುಭವವಿಲ್ಲದವ
2) ಪ್ರಾಣ ಹಿಂಡು - ಬಹಳ ಪೀಡಿಸು
3) ಬಣ್ಣಕಟ್ಟು - ಇಲ್ಲದಿರುವುದನ್ನು ಸೇರಿಸು
4) ಬಣ್ಣ ಬಯಲಿಗೆ ಬರು - ರಹಸ್ಯ ಬಯಲಾಗು
5) ಬಲೆಗೆ ಬೀಳು - ವಶಕ್ಕೆ ಸಿಕ್ಕು
6) ಬಾಲ ಕತ್ತರಿಸು - ಸೊಕ್ಕು ಮುರಿ
7) ಬಿಸಿ ಬಿಸಿ ಸುದ್ದಿ - ಆಗ ತಾನೇ ಪ್ರಕಟವಾದ ಸುದ್ದಿ
8) ಬಣ್ಣ ಹೆಚ್ಚು- ನಯವಾಗಿ ಮಾತಾಡು
9) ಬೆನ್ನು ತಟ್ಟು - ಪ್ರೋತ್ಸಾಹಿಸು
10) ಮಣ್ಣು ಪಾಲಾಗು - ಹಾಳಾಗು

## ಚಟುವಟಿಕೆ 8: ಗಾದೆಮಾತು ಬರೆಯೋಣ.

ಈ ಸನ್ನಿವೇಶವನ್ನು ಓದಿ ಅರ್ಥಮಾಡಿಕೊಳ್ಳಿ. ಈ ಸನ್ನಿವೇಶಕ್ಕೆ ಸೂಕ್ತವಾದ ಗಾದೆಮಾತು ರಚಿಸಿರಿ.

ರಂಗಣ್ಣನು ರೈತನಾಗಿ ತನ್ನ ಹೊಲ ಉಳುಮೆ ಮಾಡಿಕೊಂಡು ಕಷ್ಟಪಟ್ಟು ದುಡಿಯುತ್ತಿದ್ದನು. ಅವನಿಗೆ ಹೊಲದಲ್ಲಿ ಒಳ್ಳೆಯ ಬೆಳೆ ಬಂದಿತು. ಬೆಳೆದ ಬೆಳೆಗೆ ಒಳ್ಳೆಯ ಬೆಲೆಯೂ ಸಿಕ್ಕಿತು. ಇದರಿಂದ ಆತನು ಇನ್ನಷ್ಟು ಆಸಕ್ತಿಯಿಂದ ವ್ಯವಸಾಯ ಮಾಡಿದನು.

| |
|---|
| ಕೈ ಕೆಸರಾದರೆ ಬಾಯಿ ಮೊಸರು. |

ಸಹಪಾಠಿಗಳೊಂದಿಗೆ ಚರ್ಚಿಸಿ, ಆ ಗಾದೆ ಮಾತಿನ ಅರ್ಥವನು, ತಿಳಿದು, ಅದನು, ಬರೆಯಿರಿ.

ಮನುಷ್ಯನ ಬದುಕಿಗೆ ಅತಿ ಅವಶ್ಯಕ ವಸ್ತುಗಳು ಏನೆಂದರೆ ಗಾಳಿ, ನೀರು, ಊಟ, ಬಟ್ಟೆ ಮತ್ತು ವಸತಿ.ಗಾಳಿ ಮತ್ತು ನೀರು ಪುಕ್ಕಟೆಯಾಗಿ ದೊರೆತರೂ ಮಿಕ್ಕವನ್ನು ಪಡೆಯಲು ಹಣ ಬೇಕು. ಹಣ ಆಕಾಶದಿಂದ ಉದುರುವುದಿಲ್ಲ. ಹಣ ಗಳಿಸಲು ಉದ್ಯೋಗ ಮಾಡಬೇಕು.ಕೈ ಕೆಸರಾಗುವುದು ಎಂದರೆ ಉದ್ಯೋಗ ಮಾಡುವುದು; ಬಾಯಿ ಮೊಸರು ಎಂದರೆ ಹೊಟ್ಟೆಗೆ ಊಟ.ಸೋಮಾರಿಯಾದವನು ಇತರರ ಹಂಗಿನಲ್ಲಿ ಬದುಕಬೇಕು ಅಥವಾ ಭಿಕ್ಷೆ ಬೇಡಬೇಕು. ತಮ್ಮ ಮೇಲೆ ತಮಗೆ ಅಭಿಮಾನ ಇರುವವರು ತಾವೇ ದುಡಿದು ಹಣ ಸಂಪಾದನೆ ಮಾಡಬೇಕು.

4. ನೀವು ತಿಳಿದಿರುವ ನುಡಿಗಟ್ಟುಗಳನ್ನು ಬರೆಯಿರಿ.

ಕಣ್ಣಿಗೆ ಬೀಳು, ಕಣ್ಣು ಬಂತು, ಎಕ್ಕಹುಟ್ಟಿಹೋಯಿತು, ಬಾಲಬಿಚ್ಚು, ಮೂಗು ಹಾಕು, ನಿದ್ದೆಕೊರೆ, ಹೊಟ್ಟುಕುಟ್ಟು, ಸತ್ತು ಸುಣ್ಣವಾಗು, ತೋಟದೂರ, ಮೀಸೆ ಮಣ್ಣಾಗು, ಬೇಳೆಬೇಯೊಲ್ಲ, ಕಿವಿಕಚ್ಚು, ಹರಟೆಕೊಚ್ಚು, ಬೆಟ್ಟುಮಡಿಸು, ಟೋಪಿ ಹಾಕು, ಹುಬ್ಬು ಹಾರಿಸು,

## ಚಟುವಟಿಕೆ 7: ನುಡಿಗಟ್ಟು

ಶಿಕ್ಷಕರ / ಹಿರಿಯರ ಸಹಾಯದೊಂದಿಗೆ ನುಡಿಗಟ್ಟುಗಳನ್ನು ಸಂಗ್ರಹಿಸಿ ಮತ್ತು ಅವುಗಳ ಅರ್ಥ ಬರೆಯಿರಿ. ಅವಶ್ಯವಿದ್ದರೆ ಶಬ್ದಕೋಶದ ಸಹಾಯ ಪಡೆದುಕೊಳ್ಳಿ.

| ಮಾದರಿ | ಕಾಲಿಗೆ ಬುದ್ಧಿ ಹೇಳು | ಓಡಿ ಹೋಗು |
|---|---|---|
| 1 | 1) ಪ್ರಪಂಚ ಕಾಣದವ – ಅನುಭವವಿಲ್ಲದವ | |
| 2 | 2) ಪ್ರಾಣ ಹಿಂಡು – ಬಹಳ ಪೀಡಿಸು | |
| 3 | 3) ಬಣ್ಣಕಟ್ಟು – ಇಲ್ಲದಿರುವುದನ್ನು ಸೇರಿಸು | |
| 4 | 4) ಬಣ್ಣ ಬಯಲಿಗೆ ಬರು – ರಹಸ್ಯ ಬಯಲಾಗು | |
| 5 | 5) ಬಲೆಗೆ ಬೀಳು – ವಶಕ್ಕೆ ಸಿಕ್ಕು | |
| 6 | 6) ಬಾಲ ಕತ್ತರಿಸು – ಸೊಕ್ಕು ಮುರಿ | |
| 7 | 7) ಬಿಸಿ ಬಿಸಿ ಸುದ್ದಿ – ಆಗ ತಾನೇ ಪ್ರಕಟವಾದ ಸುದ್ದಿ | |
| 8 | 8) ಬಣ್ಣ ಹಚ್ಚು- ನಯವಾಗಿ ಮಾತಾಡು | |
| 9 | 9) ಬೆನ್ನುತಟ್ಟು – ಪ್ರೋತ್ಸಾಹಿಸು | |
| 10 | 10) ಮಣ್ಣುಪಾಲಾಗು – ಹಾಳಾಗು | |

## ಚಟುವಟಿಕೆ 8: ಗಾದೆಮಾತು ಬರೆಯೋಣ.

ಈ ಸನ್ನಿವೇಶವನ್ನು ಓದಿ ಅರ್ಥಮಾಡಿಕೊಳ್ಳಿ. ಈ ಸನ್ನಿವೇಶಕ್ಕೆ ಸೂಕ್ತವಾದ ಗಾದೆಮಾತು ರಚಿಸಿರಿ.

ರಂಗಣ್ಣನು ರೈತನಾಗಿ ತನ್ನ ಹೊಲ ಉಳುಮೆ ಮಾಡಿಕೊಂಡು ಕಷ್ಟಪಟ್ಟು ದುಡಿಯುತ್ತಿದ್ದನು. ಅವನಿಗೆ ಹೊಲದಲ್ಲಿ ಒಳ್ಳೆಯ ಬೆಳೆ ಬಂದಿತು. ಬೆಳೆದ ಬೆಳೆಗೆ ಒಳ್ಳೆಯ ಬೆಲೆಯೂ ಸಿಕ್ಕಿತು. ಇದರಿಂದ ಆತನು ಇನ್ನಷ್ಟು ಆಸಕ್ತಿಯಿಂದ ವ್ಯವಸಾಯ ಮಾಡಿದನು.

ಕೈ ಕೆಸರಾದರೆ ಬಾಯಿ ಮೊಸರು.

ಸಹಪಾಠಿಗಳೊಂದಿಗೆ ಚರ್ಚಿಸಿ, ಆ ಗಾದೆ ಮಾತಿನ ಅರ್ಥವನ್ನು ತಿಳಿದು, ಅದನ್ನು ಬರೆಯಿರಿ.

ಮನುಷ್ಯನ ಬದುಕಿಗೆ ಅತಿ ಅವಶ್ಯಕ ವಸ್ತುಗಳು ಏನೆಂದರೆ ಗಾಳಿ, ನೀರು, ಊಟ, ಬಟ್ಟೆ ಮತ್ತು ವಸತಿ. ಗಾಳಿ ಮತ್ತು ನೀರು ಪುಕ್ಕಟೆಯಾಗಿ ದೊರೆತರೂ ಮಿಕ್ಕವನ್ನು ಪಡೆಯಲು ಹಣ ಬೇಕು. ಹಣ ಆಕಾಶದಿಂದ ಉದುರುವುದಿಲ್ಲ. ಹಣ ಗಳಿಸಲು ಉದ್ಯೋಗ ಮಾಡಬೇಕು. ಕೈ ಕೆಸರಾಗುವುದು ಎಂದರೆ ಉದ್ಯೋಗ ಮಾಡುವುದು; ಬಾಯಿ ಮೊಸರು ಎಂದರೆ ಹೊಟ್ಟೆಗೆ ಊಟ. ಸೋಮಾರಿಯಾದವನು ಇತರರ ಹಂಗಿನಲ್ಲಿ ಬದುಕಬೇಕು ಅಥವಾ ಭಿಕ್ಷೆ ಬೇಡಬೇಕು. ತಮ್ಮ ಮೇಲೆ ತಮಗೆ ಅಭಿಮಾನ ಇರುವವರು ತಾವೇ ದುಡಿದು ಹಣ ಸಂಪಾದನೆ ಮಾಡಬೇಕು.

## ಚಟುವಟಿಕೆ 9: ಗಾದೆ–ಕಥೆ

ಈ ಕೆಳಗಿನ ಗಾದೆಮಾತನ್ನು ಓದಿ ಅರ್ಥಮಾಡಿಕೊಳ್ಳಿ, ಈ ಕೆಳಗಿನ ಗಾದೆಮಾತಿಗೆ **ಸೂಕ್ತ ಕಥೆ** ರಚಿಸಿ.

**"ಅತಿ ಆಸೆ ಗತಿಗೇಡು" ಅಥವಾ ನಿಮಗೆ ಇಷ್ಟವಾದ ಗಾದೆಗೆ ಪೂರಕವಾಗಿ ಒಂದು ಸಣ್ಣ ಕಥೆ ಬರೆಯಿರಿ.**

ಒಬ್ಬ ವ್ಯಕ್ತಿಯ ಹತ್ತಿರ ಒಂದು ಕೋಳಿ ಇತ್ತು ಅದು ಪ್ರತಿದಿನವೂ ಒಂದು ಚಿನ್ನದ ಮೊಟ್ಟೆ ನೀಡುತ್ತಿತ್ತು ಆ ವ್ಯಕ್ತಿಯು ಕೋಳಿಯನ್ನು ಕೊಯ್ದರೆ ಎಲ್ಲಾ ಮೊಟ್ಟೆಗಳು ಈ ದಿನವೇ ಸಿಗುತ್ತವೆ ಎಂದು ಆ ಕೋಳಿಯನ್ನು ಕೊಯ್ದನು. ನೋಡಿದರೆ ಒಳಗೆ ಒಂದೇ ಮೊಟ್ಟೆ ಇತ್ತು ಪ್ರತಿದಿನವೂ ಕೊಡುವ ಚಿನ್ನದ ಮೊಟ್ಟೆಯನ್ನು ಹಾಳು ಮಾಡಿಬಿಟ್ಟನು ಈ ಕಥೆಯು ಅತಿ ಆಸೆ ಗತಿಗೇಡು ಎನ್ನುವ ಗಾದೆಗೆ ಪೂರಕವಾಗಿದೆ.

## ಚಟುವಟಿಕೆ 10: ಗಾದೆ ವಿಶೇಷ

ನೀಡಲಾದ ಪದಗಳನ್ನು ಗಮನಿಸಿ ಗೆಳೆಯರೊಂದಿಗೆ ಚರ್ಚಿಸಿ ಆ ಪದಗಳನ್ನು ಬಳಸಿ **ಗಾದೆ ಮಾತುಗಳನ್ನು** ಬರೆಯಿರಿ.

| ಪದಗಳು | | ಗಾದೆಮಾತು |
|---|---|---|
| ಪೈರು | ಮೊಳಕೆ | ಬೆಳೆಯುವ ಪೈರು ಮೊಳಕೆಯಲ್ಲಿ |
| ಉಪ್ಪು | ತಾಯಿ | ಉಪ್ಪಿಗಿಂತ ರುಚಿಯಿಲ್ಲ ತಾಯಿಗಿಂತ ಬಂಧುವಿಲ್ಲ |
| ತೆನೆಬಳ್ಳ | ಹನಿಹಳ್ಳ | ಹನಿಹನಿಗೂಡಿದರೆ ಹಳ್ಳ ತೆನೆ ತೆನೆಗೂಡಿದರೆ ಬಳ್ಳ |
| ಆಕಳು | ಹಾಲು | ಆಕಳು ಕಪ್ಪಾದರೆ ಹಾಲು ಕಪ್ಪೆ. |
| ಹಲ್ಲು | ಕಡಲೆ | ಹಲ್ಲಿದ್ದವರಿಗೆ ಕಡಲೆ ಇಲ್ಲ. ಕಡಲೆ ಇದ್ದವರಿಗೆ ಹಲ್ಲಿಲ್ಲ. |

**ಇದರಲ್ಲಿ ನಿಮಗೆ ಇಷ್ಟವಾದ ಗಾದೆಮಾತನ್ನು ವಿವರಿಸಿ ಬರೆಯಿರಿ. ಅದು ನಿಮಗೆ ಯಾಕೆ ಇಷ್ಟ ಎಂಬುದನ್ನೂ ತಿಳಿಸಿರಿ.**

ಮಾತು ಬೆಳ್ಳಿ ಮೌನ ಬಂಗಾರ :- ಇದು ನನಗೆ ಇಷ್ಟ. ಏಕೆಂದರೆ ಮಾತು ಹೆಚ್ಚಿಗೆ ಅಥವಾ [illegible] ಮಾತುಗಳನ್ನು ಆಡುತ್ತಾ ಇರಬಾರದು. ಸಂದರ್ಭಕ್ಕೆ ತಕ್ಕಂತೆ ಮಾತನಾಡಬೇಕು. [illegible] ಸಂದರ್ಭದಲ್ಲಿ ಮೌನವಾಗಿರಬೇಕು.

## ಚಟುವಟಿಕೆ 11: ಗಾದೆ ಹುಡುಕು

ಕೃಷಿಗೆ ಸಂಬಂಧಿಸಿದಂತೆ 3 ಮತ್ತು ಶಿಕ್ಷಣಕ್ಕೆ ಸಂಬಂಧಿಸಿದಂತೆ 3 ಗಾದೆಮಾತುಗಳನ್ನು ಸಂಗ್ರಹಿಸಿ ಬರೆಯಿರಿ. ಅವಶ್ಯವಿದ್ದಲ್ಲಿ ನಿಮ್ಮ ಪೋಷಕರ ಸಹಾಯ ಪಡೆಯಿರಿ.

### ಕೃಷಿಗೆ ಪೂರಕ ಗಾದೆಗಳು

1. ಅಂಗೈ ಹಾಗೆ ಹೊಲ ಮಾಡಿದರೆ ಮುಂಗೈ ತುಂಬ ತುಪ್ಪ.
2. ಉತ್ತು ಬಾಳುವವನ ಬದುಕು ಎತ್ತಲೂ ಲೇಸು.
3. ತಗ್ಗು ಗದ್ದೆಗೆ ಮೂರು ಬೆಳೆ, ಎತ್ತರ ಗದ್ದೆಗೆ ಒಂದೇ ಬೆಳೆ.

### ಶಿಕ್ಷಣಕ್ಕೆ ಪೂರಕ ಗಾದೆಗಳು

1. ಅಲ್ಪ ವಿದ್ಯಾ ಮಹಾ ಗರ್ವಿ
2. ~~ಜಾ~~ ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆಯೇ ಮೇಲು
3. ವಿದ್ಯೆಗೆ ವಿನಯವೇ ಭೂಷಣ.

## ಚಟುವಟಿಕೆ 12: ಘಟನೆಗೊಂದು ಗಾದೆ

1. ನೀಡಲಾದ ಪಠ್ಯವನ್ನು ಓದಿ, ಅದರಲ್ಲಿ ಬಂದಿರುವ ಗಾದೆ ಮಾತು ಮತ್ತು ನುಡಿಗಟ್ಟುಗಳನ್ನು ಗುರ್ತಿಸೋಣ.

ಗುಹೆಯೊಂದರಲ್ಲಿ ನರಿಯೊಂದು ವಾಸವಾಗಿತ್ತು. ಅದು ಕೈ ಕೆಸರಾದರೆ ಬಾಯಿ ಮೊಸರೆಂದು ತಿಳಿದಿತ್ತು. ಆದ್ದರಿಂದ ಅದು ಮೈಲುಗಟ್ಟಲೆ ದಿನಾಲು ಆಹಾರ ಅರಸಿ ಹೊರಹೋಗುತ್ತಿತ್ತು ಮತ್ತು ಸಂಜೆಯಾಗುತ್ತಿದ್ದಂತೆ ಆ ಗುಹೆಯನ್ನು ಸೇರಿಕೊಂಡು ಸುರಕ್ಷಿತವಾಗಿತ್ತು. ಒಮ್ಮೆ ನರಿಯು ಆಹಾರ ಅರಸಿ ಹೊರಗೆ ಹೋಗಿತ್ತು. ಅದೇ ಸಮಯಕ್ಕೆ ಹಸಿದ ಹುಲಿಯೊಂದು ಆಹಾರ ಹುಡುಕುತ್ತಾ ಗುಹೆಯ ಒಳಗೆ ನುಗ್ಗಿತು. ಅಲ್ಲಿ ಏನೂ ಸಿಗಲಿಲ್ಲ. ಆದರೆ ಗುಹೆಯಲ್ಲಿ ನರಿಯು ಇರುವಿಕೆಯನ್ನು ಗುರುತಿಸಿತು ಮತ್ತು ತನ್ನ ಬೇಟೆಗಾಗಿ ಅಲ್ಲೇ ಅಡಗಿತು. ಸಂಜೆ ಗುಹೆಯ ಬಳಿ ಬಂದ ನರಿಗೆ ಯಾರೋ ಗುಹೆಯ ಬಳಿ ಸುಳಿದಾಡಿರುವ ವಾಸನೆಯನ್ನು ಗ್ರಹಿಸಿತು. ಅನುಮಾನಗೊಂಡ ನರಿಯು ಒಂದು ಉಪಾಯ ಮಾಡಿತು. ಅದರಂತೆ ಗುಹೆಯನ್ನು ಕುರಿತು, "ಎಲೆ ಗುಹೆಯೇ, ಪ್ರತೀ ದಿನ ಬಂದಾಗ ನನ್ನನ್ನು ಆತ್ಮೀಯವಾಗಿ ಸ್ವಾಗತಿಸುತ್ತಿದ್ದೆ. ಒಳಗೆ ಬಾ ಎಂದು ಕರೆಯುತ್ತಿದ್ದೆ, ಆದರೆ ಇಂದೇಕೆ ಸುಮ್ಮನಿರುವೆ?" ಎಂದಿತು. ಹುಲಿಯು ನಿಜವಿರಬಹುದೆಂದು ನಂಬಿತು ಮತ್ತು ಗುಹೆ ಮಾತನಾಡಲಿಲ್ಲವಾದ್ದರಿಂದ ಹುಲಿಯು ನರಿಯನ್ನು "ಒಳಗೆ ಬಾ ಗೆಳೆಯಾ" ಎಂದಿತು. ಈಗ ನರಿಯ ಊಹೆ ನಿಜವಾಗಿತ್ತು. ಗುಹೆಯಲ್ಲಿ ಆಗಂತುಕನಿರುವುದು ಸ್ಪಷ್ಟವಾಯಿತು. ಕೂಡಲೇ ನರಿಯು ಕಾಲಿಗೆ ಬುದ್ಧಿ ಹೇಳಿತು. ಹುಲಿಯು ಪೆಚ್ಚುಮೊರೆ ಹಾಕಿಕೊಂಡು "ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ" ಎಂದು ಗೊಣಗುತ್ತಾ ಅಲ್ಲಿಂದ ಕಂಬಿಕಿತ್ತಿತು.

| ಗಾದೆಮಾತು | ನುಡಿಗಟ್ಟು |
|---|---|
| ಕೈ ಕೆಸರಾದರೆ ಬಾಯಿ ಮೊಸರು | ಕಾಲಿಗೆ ಬುದ್ಧಿ ಹೇಳು.<br>ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ. |

2. ಕೆಳಗಿನವುಗಳನ್ನು ನುಡಿಗಟ್ಟು, ಗಾದೆ, ಒಗಟುಗಳಾಗಿ ವಿಂಗಡಿಸಿ ಬರೆಯೋಣ.

(ಮೂಗು ತೂರಿಸು, ಕೇಳದ ಕಿವಿ ಊರಿಗೆ ಮಾರಿ ತಂದಿತು, ಕಾಲಿಗೆ ಬುದ್ಧಿ ಹೇಳು, ದಾಸ್ ಬುರುಡೆ ದೌಲತ್ ಬುರುಡೆ ಲೋಕಕೆಲ್ಲಾ ಒಂದೇ ಬುರುಡೆ, ಬೆನ್ನಿಗೆ ಚೂರಿ ಹಾಕು, ಒಂದು ಕುರಿ ಹಳ್ಳಕ್ಕೆ ಬಿದ್ದರೆ ಎಲ್ಲಾ ಬಿದ್ದವು, ಚಿನ್ನದ ಪೆಟ್ಟಿಗೆಯಲ್ಲಿ ಬೆಳ್ಳಿ ಲಿಂಗ, ತಲೆ ಹಾಕು, ಮುಚ್ಚಿಟ್ಟಿದ್ದು ಮಣ್ಣಿನ ಪಾಲು, ಕರುಳು ಹಿಂಡು, ಮಂಕು ಬೂದಿ, ಚಿಕ್ಕ ತೋಟ ಚೂರು ಬಿದ್ದರೆ ಹಾಳು)

| ಗಾದೆಗಳು | ಒಗಟುಗಳು | ನುಡಿಗಟ್ಟು |
|---|---|---|
| ಮುಚ್ಚಿಟ್ಟಿದ್ದು ಮಣ್ಣಿನ ಪಾಲು | ಚಿನ್ನದ ಪೆಟ್ಟಿಗೆಯಲ್ಲಿ ಬೆಳ್ಳಿ ಲಿಂಗ | ಕಾಲಿಗೆ ಬುದ್ಧಿ ಹೇಳು |
| ಒಂದು ಕುರಿ ಹಳ್ಳಕ್ಕೆ ಬಿದ್ದರೆ | ಚಿಕ್ಕ ತೋಟ ಚೂರು ಬಿದ್ದರೆ ಹಾಳು | ಮೂಗು ತೂರಿಸು. |
| ಎಲ್ಲಾ ಬಿದ್ದವು | ಕೇಳದ ಕಿವಿ ಊರಿಗೆ ಮಾರಿ ತಂದಿತು | ತಲೆ ಹಾಕು. |
| | ದಾಸ್ ಬುರುಡೆ ದೌಲತ್ ಬುರುಡೆ ಲೋಕಕೆಲ್ಲಾ ಒಂದೇ ಬುರುಡೆ | ಕರುಳು ಹಿಂಡು. |
| | | ಮಂಕು ಬೂದಿ |
| | | ಬೆನ್ನಿಗೆ ಚೂರಿ ಹಾಕು. |

ಪಟ್ಟಿಮಾಡಿದ ನುಡಿಗಟ್ಟುಗಳಿಗೆ ಸ್ವಂತ ವಾಕ್ಯ ರಚಿಸಿರಿ.

ಸಿಂಹವನ್ನು ಕಂಡು ನರಿ ಕಾಲಿಗೆ ಬುದ್ಧಿ ಹೇಳಿತು.

ಬ್ರಿಟಿಷರಿಂದ ಭಾರತೀಯರಿಗೆ ಅನ್ಯಾಯ ಕಂಡು ಗಾಂಧೀಜಿಯ ಕರುಳು ಹಿಂಡಿತು.

ಮೀರ್ ಜಾಫರನು ಸಿರಾಜುದ್ದೌಲನ ಮಂತ್ರಿಯಾಗಿ ಅವನಿಗೇ ಬೆನ್ನಿಗೆ ಚೂರಿ ಹಾಕಿದ.

ಇನ್ನೊಬ್ಬರೂ ಮಾತನಾಡುವಾಗ ಮೂಗು ತೂರಿಸಬೇಡ.

## ಚಟುವಟಿಕೆ 13: ಪಾತ್ರ ಹುಡುಕೋಣ

**ಈ ಕಥೆಯನ್ನು ಓದಿ. ಈ ಕಥೆಯಲ್ಲಿ ಕಂಡುಬರುವ ಪುರುಷ, ಮಹಿಳಾ ಪಾತ್ರಗಳನ್ನು ಪಟ್ಟಿ ಮಾಡಿರಿ. ಹಾಗೆಯೇ ಇಲ್ಲಿರುವ ಏಕವಚನ ಮತ್ತು ಬಹುವಚನ ಪದಗಳನ್ನು ಕೊಟ್ಟಿರುವ ಸ್ಥಳದಲ್ಲಿ ಬರೆಯಿರಿ.**

ಒಂದು ದಿನ ತಿಲೋತ್ತಮೆಯೆಂಬ ಅಪ್ಸರೆಯು ದೇವೇಂದ್ರನ ಅಣತಿಯಂತೆ ದೇವೇಂದ್ರನ ಸಭೆಗೆ ಹೋಗುವ ಸಂದರ್ಭದಲ್ಲಿ ಪುಷ್ಪದಂತನೆಂಬ ಗಂಧರ್ವನು ಆಕೆಯನ್ನು ನೋಡಿ ಇಷ್ಟಪಟ್ಟು ಬೆನ್ನುಬಿದ್ದನು. ಇದಕ್ಕೆ ತಿಲೋತ್ತಮೆಯು ಕೋಪಗೊಂಡು "ಎಲೈ ಗಂಧರ್ವನೇ ಸ್ವಾಮಿ ಕಾರ್ಯಕ್ಕೆ ಹೋಗಬೇಕಾದ ನನ್ನನ್ನು ಅಸುರನಂತೆ ಪೀಡಿಸಿದೆ. ಆದ್ದರಿಂದ ನೀನು ಅಸುರನಾಗಿ ಜನಿಸು" ಎಂದು ಶಪಿಸಿದಳು. ಈ ಕಾರಣದಿಂದ ಅವನು 'ಮೂಕ'ನೆಂಬ ದಾನವನಾಗಿ ಹಂದಿಯ ರೂಪದಲ್ಲಿ ಹುಟ್ಟಿದನು.

ಆ ಕಾಲದಲ್ಲಿ ಅರ್ಜುನನು ಪಾಶುಪತಾಸ್ತ್ರ ಪಡೆಯಲೋಸುಗ ಶಿವನನ್ನು ಕುರಿತು ಇಂದ್ರಕೀಲ ಪರ್ವತದಲ್ಲಿ ತಪಸ್ಸು ಮಾಡುತ್ತಿದ್ದನು. ಅರ್ಜುನನನ್ನು ಅನುಗ್ರಹಿಸಬೇಕೆಂದು ತೀರ್ಮಾನಿಸಿ ಬೇಡನ ವೇಷದಿಂದ ಬಂದ ಶಿವನು ಹಂದಿಯ ರೂಪದಿಂದ ಇದ್ದ ಮೂಕ ದಾನವನನ್ನು ಅಟ್ಟಿಸಿಕೊಂಡು ಬಂದು ಬಾಣಪ್ರಯೋಗ ಮಾಡಿದಾಗ, ಹಂದಿಯು ತಪಸ್ಸು ಮಾಡುತ್ತಿದ್ದ ಅರ್ಜುನನ ಕಡೆಗೆ ಆರ್ಭಟಿಸುತ್ತ ನುಗ್ಗಿತು! ಅದನ್ನು ನೋಡಿ ಅರ್ಜುನನು ಅದರ ಮೇಲೆ ತನ್ನ ಬಾಣವನ್ನೆಸೆಯಲು ಹಂದಿಯು ಸತ್ತು ಬಿದ್ದಿತು. ಆಗ ಹಂದಿಯನ್ನು ಕೊಂದ ವಿಚಾರದಲ್ಲಿ ಶಿವನಿಗೂ ಮತ್ತು ಅರ್ಜುನನಿಗೂ ಚರ್ಚೆ ಪ್ರಾರಂಭವಾಗಿ, ಯುದ್ಧದವರೆಗೂ ಹೋಯಿತು. ಆ ಯುದ್ಧದ ನಂತರ ಶಿವನು ಅರ್ಜುನನ ತಪಸ್ಸನ್ನು ಮೆಚ್ಚಿ ಪ್ರಸನ್ನನಾಗಿ ಅವನಿಗೆ ಪಾಶುಪತಾಸ್ತ್ರವನ್ನು ನೀಡಿ ಹರಸಿದನು.

ಪುರುಷ ಪಾತ್ರಗಳು: ದೇವೇಂದ್ರ, ಪುಷ್ಪದಂತ, ಅರ್ಜುನ, ಶಿವ

ಮಹಿಳಾ ಪಾತ್ರಗಳು: ತಿಲೋತ್ತಮೆ,

ಏಕವಚನ: ಅಪ್ಸರೆ, ಪಕ್ಷಿ, ಆನೆ, ಅಸುರ, ದಾನವ, ಹಂದಿ, ವಿಶ್ವಾಮಿತ್ರ, ಪರ್ವತ, ಬಾಣ

ಬಹುವಚನ: ಅಪ್ಸರೆಯರು, ಪಕ್ಷಿಗಳು, ಅಸುರರು, ದಾನವರು, ಹಂದಿಗಳು, ಪರ್ವತಗಳು.

**ಚಟುವಟಿಕೆ 14: ಪದಗಳನ್ನು ಬಿಡಿಸೋಣ, ಸಂಧಿಯನ್ನು ಗುರುತಿಸೋಣ.**

ಅ. ಕೆಳಗಿನ ಪದಗಳನ್ನು ಬಿಡಿಸಿ ಪೂರ್ವ ಪದದ ಕೊನೆಯ ಸ್ವರಾಕ್ಷರ ಹಾಗೂ ಉತ್ತರ ಪದದ ಮೊದಲ ಸ್ವರಾಕ್ಷರವನ್ನು ಗುರುತಿಸಿ ಬರೆಯಿರಿ.

| | | | |
|---|---|---|---|
| ಮಾದರಿ: ಮಾತಿಲ್ಲ | = | ಮಾತು + ಇಲ್ಲ | ಉ + ಇ |
| 1. ಬೇರೊಬ್ಬ | = | ಬೇರೆ + ಒಬ್ಬ. | ಎ + ಒ. |
| 2. ಶಾಲೆಯಿಂದ | = | ಶಾಲೆ + ಇಂದ | ಎ + ಇ |
| 3. ಹೂ ಬುಟ್ಟಿ | = | ಹೂವಿನ + ಬುಟ್ಟಿ | ಅ + ಬು. |
| 4. ನಿನಗಲ್ಲದೆ | = | ನಿನಗೆ + ಅಲ್ಲದೆ | ಎ + ಅ |
| 5. ನೂರಾರು | = | ನೂರು + ಆರು | ಉ + ಆ |
| 6. ಬೆಟ್ಟದಾವರೆ | = | ಬೆಟ್ಟದ + ತಾವರೆ ~~ಅ + ಆ~~ | ಅ + ಆ |
| 7. ಗುಡಿಯೊಳಗೆ | = | ಗುಡಿ + ಒಳಗೆ | ಇ + ಒ. |
| 8. ಹೊಸಗನ್ನಡ | = | ಹೊಸ + ಕನ್ನಡ | ಅ + ಅ. |

| | | | |
|---|---|---|---|
| 9. ಗುರುವನ್ನು | = | ಗುರು + ಅನ್ನು | ಉ + ಅ. |
| 10. ಮನೆಯಲ್ಲಿ | = | ಮನೆ + ಅಲ್ಲಿ | ಎ + ಅ. |
| 11. ರಾಮನಲ್ಲಿ | = | ರಾಮ + ಅಲ್ಲಿ | ಅ + ಅ. |
| 12. ಹೂವಿಂದ | = | ಹೂವು + ಇಂದ | ಉ + ಇ |
| 13. ಅಡವಿಯಲ್ಲಿ | = | ಅಡವಿ + ಅಲ್ಲಿ | ಇ + ಅ |
| 14. ಮಳೆಗಾಲ | = | ಮಳೆ + ಕಾಲ | ಎ + ಅ. |
| 15. ಕರುವನ್ನು | = | ಕರು + ಅನ್ನು | ಉ + ಅ. |

ಆ. ಬಿಡಿಸಿದ ಸಂಧಿ ಪದಗಳನ್ನು ಗುರುತಿಸಿ ಸರಿಯಾದ ಬಾಕ್ಸಿನಲ್ಲಿ ಬರೆಯಿರಿ.

| ಲೋಪ ಸಂಧಿ | ಆಗಮ ಸಂಧಿ | ಆದೇಶ ಸಂಧಿ |
|---|---|---|
| ಮಾತಿಲ್ಲ | ಗಾಳಿಯಿಂದ. | ಮಳೆಗಾಲ |
| ರಾಮನಲ್ಲಿ | ಅಡವಿಯಲ್ಲಿ | ಹೂಬುಟ್ಟಿ |
| ಹೂವಿಂದ | ಕರುವನ್ನು | ಬೆಟ್ಟದಾವರೆ |
| ನನಗಲ್ಲದೆ | ಮನೆಯಲ್ಲಿ | ಹೊಸಗನ್ನಡ |
| ನಲ್ಕಾರು | ಗುರುವನ್ನು | |
| ಬೇರೊಬ್ಬ | ಗುಡಿಯೊಳಗೆ | |

## ನನ್ನ ಕಲಿಕೆ

| ಕ್ರ. ಸಂ | ಕಲಿಕೆ | ಸರಿ ಗುರುತು |
|---|---|---|
| 1 | ಲೇಖನ ಚಿಹ್ನೆಗಳಿಗೆ ಅನುಗುಣವಾಗಿ ಬರೆಯುವುದನ್ನು ಮತ್ತು ಓದುವುದನ್ನು ಮಾಡುತ್ತೇನೆ. | |
| 2 | ಲೇಖನ ಚಿಹ್ನೆಗಳನ್ನು ನನ್ನ ಬರವಣಿಗೆಯಲ್ಲಿ ಸ್ಪಷ್ಟವಾಗಿ ಬಳಸುತ್ತೇನೆ. | |
| 3 | ಗಾದೆ ನುಡಿಗಟ್ಟುಗಳನ್ನು ನನ್ನದೇ ಮಾತುಗಳಲ್ಲಿ ವಿವರಿಸುತ್ತೇನೆ. | |
| 4 | ಕಾಲ ಲಿಂಗ ಮುಂತಾದ ವ್ಯಾಕರಣದ ಅಂಶಗಳನ್ನು ವಾಕ್ಯದಲ್ಲಿ ಸರಿಯಾಗಿ ಪ್ರಯೋಗಿಸುತ್ತೇನೆ. | |

**ಶಿಕ್ಷಕರ ಹಿಮ್ಮಾಹಿತಿ**

ದಿನಾಂಕ: ಶಿಕ್ಷಕರ ಸಹಿ